## ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ

## ಸಿ.ಸಿ. ನಂ. 284/2020

**ಸಿ.ಡಬ್ಲ್ಯೂ: 10 ಪಿ.ಡಬ್ಲ್ಯೂ: 5**

ಸಾಕ್ಷಿದಾರನ ಹೆಸರು : ಮಲ್ಲರೆಡ್ಡಿ
ತಂದೆಯ ಹೆಸರು : ಶಿವರೆಡ್ಡಿ
ವಯಸ್ಸು : 60 ವರ್ಷ
ಕೆಲಸ : ವ್ಯವಸಾಯ
ವಾಸ : ಬೀರಳ್ಳಿ ಗ್ರಾಮ

**ಸಾಕ್ಷಿಗೆ ದಿನಾಂಕಃ 17.08.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ನನಗೆ ಚಾಸಾ 11 ಪರಿಚಯ. 2020 ರಲ್ಲಿ ಒಂದು ದಿನ ನಾನು ಬೀರಳ್ಳಿ ಬಸ್ ಸ್ಟಾಂಡ್ ನಲ್ಲಿ ಇದ್ದಾಗ ಪೋಲಿಸರು ಆರೋಪಿಯ ಅಂಗಡಿಗೆ ಹೋಗಿ ಅಲ್ಲಿ ಮದ್ಯದ ಬಾಟಲ್ ಗಳನ್ನು ವಶಕ್ಕೆ ಪಡೆದರು. ಅದನ್ನು ನಾನು ನೋಡಿದೆ. ಅಲ್ಲಿ ಬೆಂಗಳೂರು ವ್ಹೆಸ್, ಒ ಟಿ ಎಂಬ ಲಿಕ್ಕರ್ ಇದ್ದವು. ಅದರ ಹೆಸರು ನನಗೆ ಸರಿಯಾಗಿ ಹೇಳಲು ಆಗುವುದಿಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೆನೆ.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಸ್ ಕೆ ವಕೀಲರಿಂದ

2. ಪೋಲಿಸರ ಮುಂದೆ ನಾನು ಬೀರಳ್ಳಿ ಬಸ್ ಸ್ಟಾಂಡ್ ಬಳಿ ಹೇಳಿಕೆ ನೀಡಿದ್ದೆನೆ. ಪೋಲಿಸರ ಹೆಸರು ಗೊತ್ತಿಲ್ಲ. ಆರೋಪಿ ಬೀರಳ್ಳಿ ಗ್ರಾಮದವನಾಗಿರುತ್ತಾನೆ. ನಾನು ಸಹ ಬೀರಳ್ಳಿ ಗ್ರಾಮದವನು. ಘಟನಾ

ಸಮಯದಲ್ಲಿ ನನ್ನ ಜೊತೆ ಹಲವಾರು ಜನ ಇದ್ದರು. ಅವರ ಹೆಸರು ಹೇಳಲು ಆಗುವುದಿಲ್ಲ. ಪೋಲಿಸರು ಬಂದಾಗ ನಾನು ಬೀರಳ್ಳಿ ಬಸ್ ಸ್ಟಾಂಡ್ ಬಳಿ ಇದ್ದೆ. ಆಗ ಸಮಯ ಬೆಃ 11.00 ಗಂಟೆ ಆಗಿತ್ತು. ಪೋಲಿಸರು ಬಂದಾಗ ಸಮಯ 11.00 ಗಂಟೆ ಆಗಿತ್ತು. ಪೋಲಿಸರು ಜೀಪಿನಲ್ಲಿ ಬಂದಿದ್ದನ್ನು ನಾನು ನೋಡಿದೆ. ಪೋಲಿಸರು ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ. ಪೋಲಿಸರನ್ನು ನಾನು ಸುಮಾರು 100 ಮೀ ದೂರದಲ್ಲಿ ನೋಡಿದೆನು. ಪೋಲಿಸರು ಅಂಗಡಿಗೆ ಹೋಗಿ ಮದ್ಯದ ಬಾಟಲ್ ಗಳನುನ ತೆಗೆದುಕೊಂಡು ಬಂದರು. ಅದು ಅಂಗಡಿ ಹಾಗೂ ಮನೆ ಆಗಿರುತ್ತದೆ. ಸದರಿ ಮನೆಯನ್ನು ಆರೋಪಿ ಬಾಡಿಗೆಗೆ ತೆಗೆದುಕೊಂಡಿರುತ್ತಾನೆ. ಅದರ ಮಾಲೀಕರು ಕೇಶವರೆಡ್ಡಿ ಆಗಿರುತ್ತಾರೆ. ಆರೋಪಿ ಮನೆಯಲ್ಲಿ 8 ವರ್ಷದಿಂದ ಬಾಡಿಗೆ ಇರುತ್ತಾರೆ. ಸದರಿ ಮನೆಯ ಚಕ್ಕುಬಂದಿ ಹೇಳಲು ಆಗುತ್ತದೆ. ಪೂರ್ವಕ್ಕೆ ಕೇಶವರೆಡ್ಡಿಯವರ ಮನೆ, ಪಶ್ಚಿಮಕ್ಕೆ ದೇವಸ್ತಾನ ಜಾಗ, ಉತ್ತರಕ್ಕೆ ಗ್ರಾಮ ಪಂಚಾಯತಿ ರಸ್ತೆ. ದಕ್ಷಿಣಕ್ಕೆ ದೇವಸ್ತಾನ ಇದೆ. ಪೋಲಿಸರು ಜೀಪಿನಿಂದ ಇಳಿದು ಆರೋಪಿಯನ್ನು ಮನೆಯ ಒಳಗೆ ಕರೆದುಕೊಂಡು ಹೋಗಿ ನಂತರ ವಾಪಸ್ ಜೀಪಿನಲ್ಲಿ ಠಾಣೆಗೆ ಕರೆದುಕೊಂಡು ಹೋದರು.

3. ನನಗೆ ಕನ್ನಡ ಓದಲು ಬರುವುದಿಲ್ಲ. ಆರೋಪಿಯು ಪೋಲಿಸರಿಂದ ತಪ್ಪಿಸಿಕೊಂಡು ಓಡಿ ಹೋದನು ಎಂದು ನಾನು ಹೇಳಿಕೆ ನೀಡಿಲ್ಲ. ಘಟನಾ ಸಮಯದಲ್ಲಿ ಸುಮಾರು 20-30 ಜನ ಸೇರಿದ್ದರು. 10 ಜನರು ರಸ್ತೆಯ ಬಳಿ ಇದ್ದರು. ಕೆಲವು ಜನರು ಪಂಚಾಯತಿ ಬಳಿ ಹಾಗೂ ಕೆಲವು ಜನರು ಗುಡಿಯ ಬಳಿ ಇದ್ದರು. ಆರೋಪಿಯ ಮನೆ ಬಳಿ ಎಷ್ಟು ಜನ ಇದ್ದರು ಎಂದು ನಾನು ನೋಡಿಲ್ಲ. ಈ ಪ್ರಕರಣದಲ್ಲಿ ಆರೋಪಿಯನ್ನು ಕರೆದುಕೊಂಡು ಹೋದ ನಂತರ ಏನಾಯಿತು

ಎಂದು ನನಗೆ ಗೊತ್ತಿಲ್ಲ. ನಾನು ಆ ದಿನ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಯಾವುದೇ ರೀತಿಯ ಮದ್ಯವನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು-ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**